ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಮಾನ್ಯ ಅಧ್ಯಕ್ಷರೇ ಶಹಪುರ ತಾಲ್ಲೂಕಿನಲ್ಲಿ ೧೯೭೧ರ ಸೆನ್ಸಸ್ ಪ್ರಕಾರ ವೆಕೆಂಟ್ ಬ್ಲಾಕ್ಸ್ ಎಷ್ಟು ಆಗಿತ್ತು ? ಈ ವರ್ಷ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಡಿ. ಬಿ. ಇನಾಂದಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಸಚಿವರು).—ಶಹಪುರ ತಾಲ್ಲೂಕಿನಲ್ಲಿ ಒಂದು ವೆಕೆಂಟ್ ಬ್ಲಾಕ್ ಇದೆ. ಒಂದು ವೇಳೆ ಅವರು ಇಪ್ಪತ್ತೈದು ಸಾವಿರ ರೂಪಾಯಿ ಹಣ ಮತ್ತು ನಾಲ್ಕು ಎಕರೆ ಜಮೀನು ಕೊಟ್ಟರೆ ಇದನ್ನು ಮಂಜೂರು ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ.— ಈಗಾಗಲೇ ಇದಕ್ಕೆ ೨೫ ಸಾವಿರ ರೂಪಾಯಿ ಮತ್ತು ನಾಲ್ಕು ಎಕರೆ ಭೂಮಿ ಕೊಡುವುದಾಗಿ ಸರ್ಕಾರಕ್ಕೆ ತಿಳಿಸಿದ್ದೇವೆ.

ಶ್ರೀ ಡಿ. ಬಿ. ಇನಾಮ್‌ದಾರ್ —ನಾನು ಇದನ್ನು ಪರಿಶೀಲನೆ ಮಾಡುತ್ತೇನೆ.

ಶಿವಮೊಗ್ಗದಲ್ಲಿ ಕುವೆಂಪು ರಂಗಮಂದಿರ

೩೫. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಾರ್ತಾ, ಯುವಜನ ಸೇವೆಗಳು, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

೧) ಶಿವಮೊಗ್ಗ ನಗರದಲ್ಲಿ ನಿರ್ಮಾಣವಾಗುತ್ತಿರುವ ಕುವೆಂಪು ರಂಗಮಂದಿರದ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ?

೨) ಈ ರಂಗಮಂದಿರ ನಿರ್ಮಾಣ ಯಾವ ಸಂಸ್ಥೆ ಪ್ರಾಧಿಕಾರಕ್ಕೆ ಪಹಿಸಲ್ಪಟ್ಟಿದೆ ?

೩) ರಂಗಮಂದಿರ ನಿರ್ಮಾಣದ ಅಂದಾಜು ವೆಚ್ಚ ಮತ್ತು ಇಲ್ಲಿಯವರೆಗೆ ಖರ್ಚಾಗಿರುವ ಹಣ.

೪) ಈ ನಿರ್ಮಾಣಕ್ಕೆ ನಿಗದಿಯಾಗಿರುವ ಅವಧಿ ಮತ್ತು ಕೆಲಸ ಪ್ರಾರಂಭವಾದ ದಿನ.

೫) ಸರ್ಕಾರ ಈ ರಂಗಮಂದಿರ ನಿರ್ಮಾಣಕ್ಕೆ ಕೊಟ್ಟಿರುವ ಸಹಾಯಧನ ಮತ್ತು ಇಲ್ಲಿಯವರೆಗೆ ಬಿಡುಗಡೆಯಾದ ಹಣ

೬) ರಂಗಮಂದಿರ ನಿರ್ಮಾಣ ಬಹಳ ಬೇಗ ಮುಗಿಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು.

ಶ್ರೀ ಜೀವರಾಜ ಆಳ್ವ (ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

೧) ಇಲ್ಲ

೨) ಉದ್ಭವಿಸುವುದಿಲ್ಲ.

೩) ಉದ್ಭವಿಸುವುದಿಲ್ಲ.

೪) ಉದ್ಭವಿಸುವುದಿಲ್ಲ.

೫) ಉದ್ಭವಿಸುವುದಿಲ್ಲ.

೬) ಉದ್ಭವಿಸುವುದಿಲ್ಲ.

ಒನೇ ಪಟ್ಟಿಯಲ್ಲಿ ಮುಂದೂಡಲಾಗಿದ್ದ ಪ್ರಶ್ನೆಗಳು

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಮಂತ್ರಿಗಳು ಆಶ್ಚರ್ಯಕರವಾದ ಉತ್ತರ ಕೊಟ್ಟಿದ್ದಾರೆ. ಈ ರಂಗಮಂದಿರದ ಕೆಲಸ ಪ್ರಾರಂಭ ಮಾಡಲಿಕ್ಕೆ ನನಗೆ ತಿಳಿವಳಿಕೆ ಬಂದಮೇಲೆ, ಒಂದು ಸಮಿತಿಯನ್ನು ಮಾಡಿದ್ದಾರೆ. ಇದಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರು, ಯುವಜನ ಸೇವಾ ಇಲಾಖೆಯ ಅಧಿಕಾರಿಗಳು

ಕಾರ್ಯದರ್ಶಿಗಳೂ ಆಗಿರುವ ಈ ಸಮಿತಿ ಪಟ್ಟಿ ಕಡಿಮೆ ಈ ಸರ್ಕಾರದ ಸಮಿತಿ ಕೆಲಸ ಮಾಡುತ್ತಿದೆ. ಆದರೂ ಕೂಡ ಮಾನ್ಯ ಮಂತ್ರಿಗಳು ಇದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ. ಶಿವಮೊಗ್ಗ ದಲ್ಲಿ ಯಾವ ರಂಗಮಂದಿರವೂ ನಿರ್ಮಾಣವಾಗುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇಲ್ಲವೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಜೇವರಾಜ ಆಳ್ವ.— ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುವುದಾದರೆ, ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಜಿಲ್ಲೆಗೆ ಒಂದು ರಂಗಮಂದಿರ ನಿರ್ಮಾಣ ಮಾಡುವ ಕಾರ್ಯ ಕ್ರಮದ ಪ್ರಕಾರ ಶಿವಮೊಗ್ಗದಲ್ಲಿ ಒಂದು ರಂಗಮಂದಿರದ ಕೆಲಸವನ್ನು ಆರಂಭ ಮಾಡಿದ್ದೇವೆ. ಇದಕ್ಕೆ ೨೫ಲಕ್ಷ ರೂಪಾಯಿಗಳ ಪರಿಷ್ಕೃತ ವೆಚ್ಚವಾಗುತ್ತದೆ. ಇದಕ್ಕೆ ಈಗಾಗಲೇ ೧೨ಲಕ್ಷ, ೫೩ ಸಾವಿರ ರೂಪಾಯಿ ಖರ್ಚಾಗಿದೆ. ಕಟ್ಟಡದ ಕಾರ್ಯ ಮುಂದುವರೆಯುತ್ತಿದೆ,

ಶ್ರೀ ಕೆ. ಎಚ್. ಶ್ರೀನಿವಾಸ್.— ಇದರಲ್ಲಿ ಸರ್ಕಾರ ಎಷ್ಟು ಹಣ ಕೊಡಲಿಕ್ಕೆ ಒಪ್ಪಿಕೊಂಡಿದೆ ? ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ? ಮತ್ತು ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ?

ಕನ್ನಡ ಚಲನ ಚಿತ್ರಗಳ ಅಭಿವೃದ್ಧಿ

೨೬೫, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಾರ್ತೆ ಯುವಜನ ಸೇವೆಗಳು ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಕನ್ನಡ ಚಲನಚಿತ್ರಗಳ ಆರೋಗ್ಯಕರ ಬೆಳವಣಿಗೆಗಾಗಿ ಚಿತ್ರೋದ್ಯಮದವರಿಂದ ಸಲಹೆಗಳು ಬಂದಿವೆಯೆ ?

ಆ) ಬೆಂಗಳೂರು ನಗರ ಹಾಗೂ ಕರ್ನಾಟಕದಲ್ಲಿ ಸಿನಿಮಾ ಚಿತ್ರಮಂದಿರಗಳಲ್ಲಿ ಕಡ್ಡಾಯವಾಗಿ ಕನಿಷ್ಠ ೬ತಿಂಗಳು ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ರಾಜ್ಯದಲ್ಲಿ ತಯಾರಿಸಲ್ಪಟ್ಟ ಚಲನಚಿತ್ರಗಳಿಗೆ ಮಾತ್ರ ಸಹಾಯ ಧನ ಹಾಗೂ ತೆರಿಗೆ ವಿನಾಯಿತಿ ನೀಡಲಾಗುವುದೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರ ನೀತಿಯೇನು?

ಶ್ರೀ ಜೇವರಾಜ ಆಳ್ವ (ಈ ಪ್ರಶ್ನೆಗೆ ವಾರ್ತೆ, ಪ್ರವಾಸೋದ್ಯಮ, ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಹೌದು ಸರ್ಕಾರವು ಅಧಿಸೂಚನೆ ಸಂಖ್ಯೆ ಎಚ್‌ಡಿ ೫೯ ಸಿಎನ್‌ಎ ೬೯ ದಿನಾಂಕ ೬-೭-೧೯೬೯ರ ಪ್ರಕಾರ (ಕರ್ನಾಟಕ ಸಿನಿಮಾ ನಿಯಂತ್ರಣ ಮಾರ್ಪಾಡು ನಿಯಮ ೧೯೬೯) ರಾಜ್ಯದ ಖಾಯಂ ಚಲನಚಿತ್ರ ಮಂದಿರಗಳಲ್ಲಿ ವರ್ಷದಲ್ಲಿ ಕನಿಷ್ಠ ೧೨ ವಾರಗಳ ಕಾಲ ಕನ್ನಡ ಚಲನಚಿತ್ರ ಪ್ರದರ್ಶನವನ್ನು ಕಡ್ಡಾಯ ಮಾಡಲಾಗಿದೆ. ಅದೇ ರೀತಿ ಸಂಚಾರಿ ಚಿತ್ರಮಂದಿರಗಳ ಲೈಸನ್ಸ್ ಅವಧಿಯು ಕನಿಷ್ಠ — ರಷ್ಟು ಕಾಲ ಕನ್ನಡ ಚಲನಚಿತ್ರಗಳ ಪ್ರದರ್ಶನವನ್ನು ಕಡ್ಡಾಯ ಮಾಡಲಾಗಿದೆ. ಆದರೆ ಈ ದೇಶದ ವಿರುದ್ಧ ಕೆಲವು ಚಿತ್ರಮಂದಿರಗಳ ಪಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ಇ) ಹೌದು ಪ್ರಸಕ್ತ ಸಹಾಯ ಧನ ನಿಯಮಾವಳಿಗಳ ಪ್ರಕಾರ ರಾಜ್ಯದಲ್ಲಿ ತಯಾರಾದ ಕನ್ನಡ ಹಾಗೂ ಇತರ ಪ್ರಾಂತೀಯ ಭಾಷೆಯ ಚಲನಚಿತ್ರಗಳಿಗೆ ಮಾತ್ರ ಸಹಾಯ ಧನ ನೀಡಲಾಗುತ್ತಿದೆ. ಆದರೆ ಶೇಕಡ ೫೦ ತೆರಿಗೆ ವಿನಾಯಿತಿಯನ್ನು ರಾಷ್ಟ್ರದ ಯಾವ ಭಾಗದಲ್ಲಿಯೇ ತಯಾರಾಗಿರುವ ಎಲ್ಲಾ ಕನ್ನಡ ಪತ್ರಗಳಿಗೂ ನೀಡಲಾಗುತ್ತಿದೆ.

ಈ) ಪ್ರಸಕ್ತ ಸಹಾಯ ಧನ ನಿಯಮಾವಳಿಯ ಪ್ರಕಾರ ರಾಜ್ಯದಲ್ಲೇ ಚಿತ್ರೀಕರಣಗೊಂಡು ತಯಾರಾದ ಚಲನಚಿತ್ರಗಳಿಗೆ ಮಾತ್ರ ಸಹಾಯ ಧನ ನೀಡಲಾಗುತ್ತಿದೆ. ಹಾಗೂ ಚಿತ್ರಕಥೆಗೆ ಅನುಗುಣ